# HAVYAKA SANDESHA

ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XVIII, No. 5 | August 2010 | Pages 12 | **Rs. 2/-**




# ANNUAL GENERAL BODY MEETING ON 19-9-2010

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2009)*

"**Havyaka Sandesha**" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat
***Hon. Joint Editor*** : G. V. Bhagwat
***Editorial Committee*** : Vishwanath Dodmane, R. M. Shastri, Sathishkumar K.C.
***Publisher*** : Narayan Akadas R. **Hon. Gen. Secretary**
***Printed at*** : M/s. Navin Printers **Mumbai - 400 016.** ✆ **2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs. 3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted. Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2009-2010**

***President*** : N. R. Hegde, Dombivli
***Vice - President*** : Shivkumar P. Bhagwat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde, D. P. Karki, Smt. Shashikala Hegde, R. N. Kameshwar, A. K. Bhat, Smt. Uma Swamy, Ganesh Shanbag, Sanjay Bhat, Sathishkumar K.C.

***Co-opted Members :***

G. V. Bhagwat
Balchandra Markande
Prakash Hegde
Smt. Vimala Bhat

***EDITORIAL***

# GOAL

The World's biggest sporting event is over and we have new World football champions. When the Spanish lost their opening match, no one perhaps imagined that they would emerge as World champions. No doubt they were talented but it was also their winning spirit, hard work, patience, perseverance that led them on the path of success. The spectacular football game which is full of action and emotion may be compared with our real life. Like in the game, even in the real life one should be smart enough to identify the opportunities and strike at the right time. Being intelligent or talented is not the only criteria for becoming successful but one should also know how and when to utilize it. The Spanish did not make maximum goals in the World cup but made the goal when they needed it the most. Even in our real life we have to make right move at the right time and move ahead with confidence. It is said "Life's battle does not go in favour of stronger or weaker man. Sooner or later he who wins is the man who thinks he can.

Some times people blame fate for their failure but actually, they don't either recognize the opportunities or fail to act prudently.

However, our life is larger and more complex than any game. In the game of football there is a single goal to aim at, whereas in the real life we have to set different goals. To lead peaceful and happy life we have to strike a balance between different aspects of life like profession and family, self interest and philanthropy, materialism and spirituality etc. Our priorities may also change with the changing times. In the journey of life, it may also be necessary to redefine our goal from time to time so that our life does not become stagnant.

THE NIGHTMARE OF INFLATION: Prices of essential commodities are sky rocketing. The time is such that a person has to think twice before purchasing vegetables and pulses. Rise in the fuel prices is also adding fuel to the inflation (in other developing countries the petrol prices are half than that in India) Luxury items might have become cheaper but one wonders whether having two nutritious meals a day is becoming a luxury.

It is said in economics that prices are determined by the law of demand and supply. With more urbanization and industrializations the agricultural sector has been neglected completely, and if the trend continues, it is feared that the world may in future face severe food shortage. Though prices of foodstuffs are going up, the farmer is not reaping the benefit. He is still reeling under the burden of debt. Those who are suffering silently want their voices to be heard. But is any one bothered?

Recently we observed BANDH to protest against MEHANGAI and especially the rise in the petrol prices. BANDH means remaining idle at home which means loss of daily wages to labourers and loss of national revenue. The cost of the BANDH has to be again borne by consumers. So what is the point? The fact remains that even after 62 years of Independence we have not evolved any effective way to raise our voice where our grievances are heard, the real issues are addressed and remedies are sought. It is said "democracy is the government of the people, by the people and for the people". Then why, our socialistic, democratic government is acting like a dumb spectator? We need some remedial measures to be taken to curb the nightmare of inflation.

e-mail : amitabhagwat@gmail.com

*Amita S Bhagwat*

*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR,*** *GHATKOPAR IN THE MEMORY OF* ***LATE SHRI T. R. BHATSHIKAR*** *(DEC.-2009)*

# PRESIDENT'S MESSAGE

Dear Friends,

The Annual General Body meeting which was planned to be held in July is postponed to Sept $19^{th}$ 2010. It will be a full day program. Apart from the meeting there will also be different competitions and entertainment program. Though there is a delay, we are sure that the A.G.M. will give a platform to our members to show their talents by participation. Mrs. Tanuja Hegde, Mr. Sanjay Bhat & Mrs. Shashikala Hegde are in charge for conducting the entertainment program. Members and their family may please contact them for participating in different programs.

The delay for holding the A.G.M. is due to the fact that the balance sheet could not be kept ready. As you know, several appeals were made for getting a Manager. Unfortunately we have not got a competent person who can keep and properly maintain the records including the accounts. We were, till now, in the look out for a Manager who also knows Kannada. However, in this circumstance we may now have to choose a person who does not know Kannada. We once again earnestly request you to come forward and help us in this regard.

We are happy to inform you all that our Hon. Editor Mrs. Amita Bhagwat, who is already known for her skill in writing, is selected as a member of the Executive Committee of the Kannada Sahitya Parishat, Maharashtra Ghataka. She is playing an active role in it. Let us congratulate her & pray the Almighty to bless her to excel in all endeavors.

We have short listed a party who is ready to buy the Panvel Land. We have called a Special General Body Meeting of Havyaka Nagara Co-operative Hsg. Society (Proposed) on $8^{th}$ August 2010 to finalize the dealing. Friends, off late, the land dealings are becoming more complicated and we have to be very careful. We have to take a right decision looking into the prevailing circumstances. We are sure that our members of the Panvel land will understand the position and come to a conclusion.

With regard to Dombivli plot we are in the final stage for getting the N.A. status. The papers are yet to be signed. We are happy to inform you that we have constituted a committee consisting of Mr. Balchandra Markande, Mr. Sanjay Bhat & Mr. Ram Kameshwar to study & make a plan for Havyakara Bhavana. The project report will help us to collect the funds. We earnestly request the members to come forward with their suggestion for Havyakara Bhavana.

Wishing you all best of luck

With warm regards.

**N. R. HEGDE**
***President***

ಸಪ್ಟಂಬರ್ 19, 2010ರಂದು ಜರಗಲಿರುವ ವಾರ್ಷಿಕ ಸಭೆಯಲ್ಲಿ ನಡೆಯಲಿರುವ ವಿವಿಧ ಸ್ಪರ್ಧೆ ಹಾಗೂ ಮನೋರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕೆಳಗಿನವರನ್ನು ಸಂಪರ್ಕಿಸಬಹುದು.

**ತನುಜಾ ಹೆಗಡೆ : 9869431749, ಶಶಿಕಲಾ ಹೆಗಡೆ : 9869015917, ಸಂಜಯ ಭಟ್ : 9869035267**

## SWARNAWALLI SEVA SAMITI, MUMBAI

**As advised by Shri Guruji, Swarnawalli Seva Samiti will conduct the following activities at Pejawar Mutt, Santacruz (East)**

1. **Varamahalaxmi Vrata on 20th August 2010 at 10.00 a.m.**
2. **Nutana Upakarma & Yajur Upakarma on 24th August, 2010 at 10.00 a.m.**

**All are requested to participate and get the blessings of Mahamata & Shri Guruji.**

**The Charges are :**

| | |
|---|---|
| VARAMAHALAXMI VRATA | Rs. 151/- per head |
| NUTANA UPAKARMA | Rs. 1501/- per head |
| YAJUR UPAKARMA | Rs. 151/- per head |

***For other details contact :***

| | |
|---|---|
| 1. Shri R. G. Bhat | 28542895 / 9867300127 |
| 2. Shri K. C. Hegde | 28671749 / 9869074115 |
| 3. Smt. Tanuja Hegde | 9869431749 |

***Note*** **: Your advance enrolement will help the volunteers to make proper arrangements.**

*PAGE DONATED BY : **SMT. GANGA P. BHAGWAT,** PRABHADEVI, IN MEMORY OF LATE SHRI P. R. BHAGWAT (DEC.-2010)*

# ಶ್ರದ್ಧಾಂಜಲಿ



ಸಂಗೀತ ವಿಶಾರದ, ಶಾಸ್ತ್ರೀಯ ಗಾಯಕ, ನಾಟಕಕಾರ, ಯಕ್ಷಗಾನ ಕಲಾವಿದ ಗಜಾನನ ಯಾಜಿಯವರು (71) ಅಲ್ಪಕಾಲದ ಅನಾರೋಗ್ಯದಿಂದ ಹೊನ್ನಾವರದ ಇಡುಗುಂಜಿಯ ಸ್ವಗೃಹದಲ್ಲಿ ಜೂನ್ 22, 2010ರಂದು ನಿಧನ ಹೊಂದಿದರು.

ತಂದೆ ವೆಂಕಟರಮಣ ಯಾಜಿಯವರು ಭಾಗವತರು ಇಡಗುಂಜಿ ಮೇಳದ ಸಂಸ್ಥಾಪಕರಲ್ಲಿ ಒಬ್ಬರು. ತಾಯಿ ಜಾನಕಿ ದೇವಿ ಜಾನಪದ ಗಾಯಕಿ. ಬಾಲ್ಯದಿಂದಲೇ ಅವರಿಗೂ ಸಂಗೀತ ಅಭಿನಯನದ ಒಲವು. ಕೆರೆಮನೆ ಮಹಾಬಲ ಹೆಗಡೆ, ಪಂಡಿತ ಚಂದ್ರಶೇಖರ ಪುರಾಣಿಕಮಠ ಅವರ ಕೈಕೆಳಗೆ ಸಂಗೀತಾಭ್ಯಾಸ ಮಾಡಿದ ನಂತರ ಮುಂಬಯಿಗೆ ಬಂದರು. ಪಂಡಿತ ಕಪಿಲೇಶ್ವರ ಬುವಾ ಹಾಗೂ ಪಂಡಿತ ಪ್ರಭುದೇವರ ಬಳಿ ಹೆಚ್ಚಿನ ಅಭ್ಯಾಸ ಮಾಡಿ ‘ಸಂಗೀತ ವಿಶಾರದ’ ಹಾಗೂ ವಿದ್ವತ್ ಪದವಿಗಳನ್ನು ಪಡೆದರು.

ಶಾಸ್ತ್ರೀಯ ಸಂಗೀತ ಹಾಗೂ ಸುಗಮ ಸಂಗೀತ ಎರಡರಲ್ಲೂ ಪರಿಣಿತಿ ಪಡೆದ ಅವರು ಬೃಹನ್ಮುಂಬಯಿ ನಗರಪಾಲಿಕೆಯ ಶಾಲೆಗಳಲ್ಲಿ ಸಂಗೀತ ಶಿಕ್ಷಕರಾಗಿ ಮಕ್ಕಳಿಗೆ ಸಂಗೀತ ಪಾಠವನ್ನು ಹೇಳಿದರು. ಮಹಾರಾಷ್ಟ್ರ, ಗೋವಾ, ಗುಜರಾತ, ಮಧ್ಯಪ್ರದೇಶ, ಉತ್ತರ ಪ್ರದೇಶ, ದೆಹಲಿ, ಕರ್ನಾಟಕ...ಎಲ್ಲೆಡೆಯಲ್ಲಿ ಕಲಾಮಹೋತ್ಸವಗಳಲ್ಲಿ ಸಂಗೀತ ಸುಧೆ ಹರಿಸಿದರು. ತಮ್ಮದೇ ಸಂಗೀತ ಶಾಲೆಯನ್ನೂ ಪ್ರಾರಂಭಿಸಿದರು. ಹರಿದಾಸ ಹಾಗೂ ಶಿವಶರಣರ ಕೃತಿಯಲ್ಲಿ ಹೆಚ್ಚು ಆಸಕ್ತಿಯುಳ್ಳ ಕಾರಣ ‘ಸಂಪದ ತರಂಗಿಣಿ’ಯನ್ನು ಆರಂಭಿಸಿ ಮುಂಬೈ, ಪುಣೆ, ನಾಸಿಕ, ಅಹಮದ್ ನಗರ, ಬೆಳಗಾವಿ, ಧಾರವಾಡ, ಶಿರಸಿ, ಪಣಜಿ, ಬೆಂಗಳೂರು ಮುಂತಾದ ಕಡೆಗೆ ಕಾರ್ಯಕ್ರಮವನ್ನು ನೀಡಿದರು. ರೇಡಿಯೋ ನಾಟಕಗಳಿಗೆ, ಸಾಕ್ಷ ಚಿತ್ರಗಳಿಗೆ ದೂರದರ್ಶನ ಕಾರ್ಯಕ್ರಮಗಳಿಗೆ ಸಂಗೀತ ಸಂಯೋಜನೆ ನೀಡಿದರಲ್ಲದೆ ಹಲವಾರು ನಾಟಕಗಳಲ್ಲಿ ತಮ್ಮ ಅಭಿನಯದಿಂದ ಜನರನ್ನು ಸೆಳೆದರು. ಮುಂಬಯಿಗೆ ಬರುವ ಮೊದಲು ಇಡಗುಂಜಿಯ ವೃತ್ತಿಮೇಳದಲ್ಲಿ ನಾಲ್ಕು ವರ್ಷ ದುಡಿದ ಅವರು ಚೆಂಡೆ, ಮೃದಂಗ ಮತ್ತು ಭಾಗವತಿಕೆಯನ್ನು ಮಾಡುತ್ತಿದ್ದರು. ಕೊನೆಯವರೆಗೂ ಯಕ್ಷಗಾನದಲ್ಲಿ ಆಸಕ್ತಿ ಉಳಿಸಿಕೊಂಡಿದ್ದರು.

*ತಾ. 22.7.2020ರಂದು ದೈವಾಧೀನರಾದ ಶ್ರೀ ಗಜಾನನ ಯಾಜಿಯವರ ಸ್ಮರಣಾರ್ಥವಾಗಿ ತಾ. 8.8.2010ರಂದು ಪೇಜಾವರ ಮಠದಲ್ಲಿ ಮಧ್ಯಾಹ್ನ 11 ಗಂಟೆಗೆ ಏರ್ಪಡಿಸಲಾದ ಸಂತಾಪ ಸೂಚಕ ಸಭೆ ಹಾಗೂ ಭೋಜನ ಕೂಟಕ್ಕೆ ಆಗಮಿಸಬೇಕಾಗಿ ಅವರ ಪತ್ನಿ ಹಾಗೂ ಮಕ್ಕಳು ಕೋರಿದ್ದಾರೆ,*

ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಗ್ರಂಥಾಲಯ, ಮಾಹಿತಿ ಕೇಂದ್ರ, ಕಲಾಭಾರತಿ, ಸಾಂಸ್ಕೃತಿಕ, ಸಾಹಿತ್ಯಿಕ ಉಪಸಮಿತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಡಾ। ಎಂ. ವಿಶ್ವೇಶ್ವರಯ್ಯ, ನವರತ್ನ ಪ್ರಶಸ್ತಿ ಒಳಗೊಂಡಂತೆ ಅನೇಕ ಪ್ರಶಸ್ತಿಗಳೂ, ಹಲವಾರು ಸನ್ಮಾನಗಳೂ ಈ ಕಲಾವಿದರನ್ನು ಅರಸಿ ಬಂದಿವೆ. ಹಲವಾರು ಪತ್ರಿಕೆಗಳು ಇವರ ಅಭಿನಯ ಕೌಶಲ ಹಾಗೂ ಸಂಗೀತ ಕಲೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿವೆ. 2006ರಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿ ದತ್ತಿ ನಿಧಿಯ ಮೂಲಕ ಪ್ರಕಟವಾದ ಅವರ ಆತ್ಮ ಚರಿತ್ರೆ ‘ನೆನಪು-ನೆನಹು’ ಅವರ ಕಲಾ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ.

ಅವರು ತಮ್ಮ ಪತ್ನಿ ಕಮಲಾ ಹಾಗೂ ಹೆಣ್ಣು ಮಕ್ಕಳಾದ ಉಷಾ, ಜ್ಯೋತಿ, ಶಾಂತಲಾರವರನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡುವಂತೆ ಪರಮಾತ್ಮನನ್ನು ಪ್ರಾರ್ಥಿಸೋಣ ●

## ಡೊಂಬಿವಲಿಯಲ್ಲಿ ವರಮಹಾಲಕ್ಷ್ಮಿ ಪೂಜೆ

ಡೊಂಬಿವಲಿಯ ಹವ್ಯಕ ವೆಲ್ಫೇರ್ ಟ್ರಸ್ಟಿನ ಧ್ಯಾನ ಮಂದಿರದಲ್ಲಿ ತಾ. 20.8.2010ರಂದು ಡೊಂಬಿವಿಲಿಯ ಹವ್ಯಕ ಮಹಿಳೆಯರ ವತಿಯಿಂದ ವರಮಹಾಲಕ್ಷ್ಮಿ ಪೂಜೆಯನ್ನು ಆಯೋಜಿಸಲಾಗಿದೆ. ಆಸಕ್ತರು ಹವ್ಯಕ ಮೆಡಿಕಲ್ ಸೆಂಟರ್ ಡೊಂಬಿವಲಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಬಹುದು. ಫೋನ್ : 0251-2487291.

## HAVYAKA NAGAR CO-OPERATIVE HOUSING SOCIETY (PROPOSED)

A Special General Body Meeting of Havyaka Nagar Co-operative Housing Society (Proposed) will be held on Sunday, the 8th August, 2010 at 3.00 pm. at "Billawa Bhavan", 2nd Floor, Station Road, Guru Narayan Marg, Santacruz (East), Mumbai-400 055.

Notice with Agenda is already dispatched to the members of the Havyaka Nagar Co-operative Housing Society (Proposed) and they are requested to attend the same.

## ಮಾನವಲೋಕ

ಮುಸ್ಸಂಜೆಯ ಹೊತ್ತಿಗೆ ಹೂವೆಲ್ಲಾ
ನಲುಗಿ ನಲುಗಿ ಬಾಡಿ ಹೋದಂತಾಗಿ
ಜೀವನವು ಮಬ್ಬುಗಟ್ಟಿದ ಗಾಜಿನ ಹಾಗೆ
ಸ್ತಬ್ಧಗೊಳ್ಳುತ್ತಲೇ ಇತ್ತು !

ಕನಸಿನ ಅಂಬರದಲ್ಲಿ ಚಂದಿರನು
ನಕ್ಕಾಗ ಮೋಡದ ಮರೆಯಿಂದ
ಹನಿಯೊಂದು ಇಳಿದಾಗ
ಮನಸ್ಸೆಲ್ಲ ಮುದವಾಗಿ ತನುವೆಲ್ಲ
ಹಗುರಾಗಿ ಶುದ್ಧ ಗಾಳಿಯ ಒಲವು
ಎಲ್ಲಿಂದರಲ್ಲಿ ಹರಡುತ್ತಿದ್ದ!

ಸಂತೆಯೆಂಬ ಏಕಾಂತ ಜಗದಗೂಡಲಿ
ರೆಂಬೆಗಳ ತುದಿಯಲ್ಲಿ ಯಾವ ದಾರಿಹಂಬಲವೋ
ಜಂಜಾಟದ ಜೀವನ ಮರೆತು ಮಾನಸ ಲೋಕದಲಿ
ಗುಬ್ಬಚ್ಚಿ ಕುಣಿಯುತ ಎಲ್ಲೆಂದರಲ್ಲಿ
ಸಾಯುತ್ತಲೇ ಇರುತ್ತವೆ ಜೀವಗಳು
ಮಾನವ ಲೋಕದಲಿ!

ಶ್ರೀಮತಿ ರಾಜೇಶ್ವರಿ ದೊಡ್ಮನೆ

*PAGE DONATED BY : **SMT. UMA SWAMY, NAVI MUMBAI IN THE MEMORY OF HER MOTHER LATE SMT. SEETA M. HEGDE** (DEC.-2009)*

# ಕರ್ಕಿಯಲ್ಲಿ ಜಿ. ಆರ್. ಹೆಗಡೆ ಮಾಸ್ತರರ ಅಭೂತಪೂರ್ವ ಜನ್ಮಶತಮಾನೋತ್ಸವ



ಹೊನ್ನಾವರ ತಾಲೂಕಿನ ಕರ್ಕಿಯ ಶ್ರೀ ಚನ್ನಕೇಶವ ಪ್ರೌಢಶಾಲೆಯ ಸಂಸ್ಥಾಪಕ ಮುಖ್ಯಾಧ್ಯಾಪಕರಾದ ದಿ. ಜಿ. ಆರ್. ಹೆಗಡೆ ಮಾಸ್ತರರ ಜನ್ಮಶತಮಾನೋತ್ಸವ ಆ ಶಾಲೆಯ ಪೂರ್ವವಿದ್ಯಾರ್ಥಿಗಳ ಹೆಮ್ಮೆಯ ಸಂಘಟನೆಯಾದ ಸೇತುಬಂಧ ಸಮಿತಿಯ ಆಶ್ರಯದಲ್ಲಿ ಅಭೂತಪೂರ್ವ ರೀತಿಯಲ್ಲಿ ಎರಡು ದಿನಗಳ ಕಾಲ ಜರುಗಿ ಇತಿಹಾಸವಾಯಿತು.

ಸೇತುಬಂಧ ಸಮತಿಯ ಅಧ್ಯಕ್ಷರಾದ ಎಸ್. ಜಿ. ಹೆಗಡೆ ಬೆಂಗಳೂರು, ಕಾರ್ಯಾಧ್ಯಕ್ಷರಾದ ಡಾ. ಎನ್. ಜಿ. ಹೆಗಡೆ ಮಾದಪ್ಪನ್, ಉಪಾಧ್ಯಕ್ಷರಾದ ಎನ್. ಆರ್. ಹೆಗಡೆ ರಾಗೋಣ್ ಹಾಗೂ ಸಮಿತಿಯ ಸರ್ವ ಪದಾಧಿಕಾರಿಗಳು, ಶಾಲೆಯ ಶಿಕ್ಷಕರು, ಪೂರ್ವ ವಿದ್ಯಾರ್ಥಿಗಳು, ಶಾಲಾಭಿಮಾನಿಗಳು ಸೇರಿ ಇಡೀ ಕಾರ್ಯಕ್ರಮವನ್ನು ಮಾದರಿ ಕಾರ್ಯಕ್ರಮವಾಗಿ ಸಂಘಟಿಸಿದ್ದು ವಿಶೇಷವಾಗಿತ್ತು.

ಶತಮಾನೋತ್ಸವ'ವನ್ನು ನಿವೃತ್ತ ನ್ಯಾಯಾಧೀಶ ಕೆ. ಕೆ. ಅವಧಾನಿ ಉದ್ಘಾಟಿಸಿದರು.ಈ ಸವಿ ಸಂದರ್ಭದಲ್ಲಿ ದಿ. ಜಿ. ಆರ್. ಹೆಗಡೆ ಮಾಸ್ತರರ ಪುತ್ಥಳಿ ಅನಾವರಣದೊಂದಿಗೆ ಅವರ ಧರ್ಮಪತ್ನಿಯುವರನ್ನು ಸನ್ಮಾನಿಸಲಾಯಿತು. 1952 ರಿಂದ ಎಸ್ಸೆಲ್ಸಿಯಲ್ಲಿ ಶಾಲೆಗೆ ಪ್ರಥಮ ಸ್ಥಾನ ಪಡೆದ ಸರ್ವ ಪ್ರತಿಭಾವಂತರನ್ನು ಹಾಗೂ ಶಾಲೆಯಲ್ಲಿ ಸೇವೆ ಸಲ್ಲಿಸಿದ ಸರ್ವ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. ದಿ. ಹೆಗಡೆಯವರ ಪುತ್ಥಳಿಯನ್ನು ಅವರ ಶಿಷ್ಯರಾದ ನಿವೃತ್ತ ಪ್ರಾಂಶುಪಾಲರಾದ ಪ್ರಿ. ಜಿ. ವಿ. ಭಟ್ ಕೊಂಕೇರಿ ಅನಾವರಣಗೊಳಿಸಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕೇರಳದ ನ್ಯಾಶನಲ್ ಲಾ ಯುನವರ್ಸಿಟಿಯ ಮಾಜಿ ವೈಸ್'ಚಾನ್ಸಲರ್ ಶ್ರೀ ಎಸ್. ಜಿ. ಭಟ್'ರವರು ವಹಿಸಿಕಂಡಿದ್ದರು. ಈ ಸಂದರ್ಭದಲ್ಲಿ ಊರಿನ ಹೆಮ್ಮೆಯ ಮಾಜಿ ಶಾಸಕರಾದ ಡಾ. ಎಂ. ಪಿ. ಕರ್ಕಿ, ಎಸ್. ವಿ. ನಾಯಕರನ್ನು ಲಲಿತಕಲಾಕೇಂದ್ರ ಅಕಾಡೆಮಿ ಪ್ರಶಸ್ತಿ ವಿಜೇತ ಗಣಪತಿ ಹೆಗಡೆ, ಪ್ರಸಿದ್ಧ ರಂಗ ಕಲಾವಿದಗಣಪತಿ ಗೌಡರ ಸಹಿತ ಹಲವು ಸಾಧಕರನ್ನು ಸನ್ಮಾನಿಸಲಾಯಿತು. ಪೂರ್ವ ವಿದ್ಯಾರ್ಥಿಗಳ ಮನರಂಜನೆ, ಕರಾವಳಿ ಕುಡಿಗಳ ಡೊಂಬರಾಟ, ದೇವರ ಆಟ ಹೊಟೆಲ್ ಶತಮಾನೋತ್ಸವ ನಿಮಿತ್ತ ಪ್ರಾಯೋಜಿಸಲ್ಪಟ್ಟ ಯಕ್ಷಗಾನಗಳು ಶತಮಾನೋತ್ಸವಕ್ಕೆ ಕಳೆತಂದವು. ನಿವೃತ್ತ ಉಪಕುಲಪತಿ ಡಾ. ಶ್ರೀಪಾದ ಭಟ್, ಸಾಹಿತಿ ವಿಷ್ಣು ನಾಯ್ಕ, ಡಾ. ಶ್ರೀಪಾದ ಶೆಟ್ಟಿ ಮುಂತಾದ ಗಣ್ಯರು ಶತಮಾನೋತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು. ●

## ಚಿಂತನ - ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

ಪ್ರೊ। ಪಿ. ಎಂ. ಹೆಗಡೆ, ಶಿರಸಿ

### ರಾಷ್ಟ್ರೀಯ ಹಬ್ಬದ ಸಂದೇಶ

ನಮಗೆ ಸ್ವಾತಂತ್ರ್ಯ ದೊರೆತ ಮೊದಲ ದಶಕದ ಮಾತು : ನಾವು ಕಾಲೇಜು ವಿದ್ಯಾರ್ಥಿಗಳು ಅಂದಿನ ಕರ್ನಾಟಕ ಕಾಲೇಜಿನ ಪ್ರಾಂಶುಪಾಲರಾದ ವಿ. ಕೃ. ಗೋಕಾಕರವರು ಧ್ವಜ ವಂದನೆಯಾದ ನಂತರ ಕೊಡುವ ಸಂದೇಶಕ್ಕಾಗಿ ಕಾಯುತ್ತಿದ್ದೆವು. ಕಾಲೇಜಿನ ಮುಂದಿರುವ ಆಟದ ಬಯಲಿನಲ್ಲಿ ವಿದ್ಯಾರ್ಥಿಗಳು ಕಿಕ್ಕಿರಿದು ಸೇರುತ್ತಿದ್ದರು. ಆಟದ ಬಯಲಿನ ಸುತ್ತ ಸಾರ್ವಜನಿಕರು, ವೃದ್ಧರು, ಮಕ್ಕಳು-ಮರಿಗಳು ಕೂಲಿಕಾರರು ಅತಿದೊಡ್ಡ ಸಂಖ್ಯೆಯಲ್ಲಿ ಜಮಾಯಿಸುತ್ತಿದ್ದರು. ಗೋಕಾಕರವರ ಸ್ವಾತಂತ್ರ್ಯ ಸಂದೇಶವನ್ನು ಮೈಯೆಲ್ಲ ಕಿವಿಯಾಗಿ ಕೇಳಿ ಸ್ಫೂರ್ತಿಗೊಂಡು ತಾವೂ ಏನೋ ದೇಶ ಕಟ್ಟುವ ಕೆಲಸದಲ್ಲಿ ಭಾಗಿಯಾಗುವ ನಿಶ್ಚಯ ಮಾಡಿಕೊಳ್ಳುತ್ತಿದ್ದರು. ಆ ಉತ್ಸವದ ಪೂರ್ಣ ಫಲವನ್ನು ಸವಿಯುವ ಅಂಗವಾಗಿ ಯಾವುದಾದರೂ ಫಲಾಹಾರ ಮಂದಿರಕ್ಕೆ ಹೋಗಿ ಸಿಹಿ ತಿಂದು ಚಹ ಕುಡಿದು ಗೋಕಾಕರವರ ಭಾಷಣದ ಗುಂಗಿನಲ್ಲಿ ನಾವು ಮನೆಗೆ ಹೋಗುತ್ತಿದ್ದೆವು.

ಇಂದು ಪ್ರಾಥಮಿಕ ಶಾಲಾ ಮಕ್ಕಳು ಹಾಗೂ ಮಾಧ್ಯಮಿಕ ಶಾಲಾ ಮಕ್ಕಳನ್ನು ಹೊರತುಪಡಿಸಿ ಕಾಲೇಜು ವಿದ್ಯಾರ್ಥಿಗಳು ಅಗಸ್ಟ್ 15 ಹಾಗೂ ಜನವರಿ 26ರನ್ನು ರಜೆಯ ದಿನಗಳನ್ನಾಗಿ ಮನೆಯಲ್ಲಿಯೇ ಆಚರಿಸುವದು ಒಂದು ಖೇದದ ವಿಷಯವಾಗಿದೆ. ನಮ್ಮ ಯುವಕರಲ್ಲಿ ರಾಷ್ಟ್ರೀಯ ಭಾವನೆ ರಿಚಾರ್ಜ್ ಆಗಬೇಡವೇ? ಸಾರ್ವಜನಿಕರಲ್ಲಿ ರಾಷ್ಟ್ರೀಯತೆ ಜಾಗೃತವಾಗುತ್ತಿರಬೇಕಲ್ಲವೇ? ಈ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದಾದರೂ ಏಕೆ?

ನಮ್ಮ ರಾಜಧಾನಿಯಾದ ಹೊಸ ದಿಲ್ಲಿಯ ಪರೇಡ್ ಮೈದಾನಿನಲ್ಲಿ ಸಾವಿರಾರು ಸೈನಿಕರು ಪಥಸಂಚಲನ ಮಾಡುತ್ತಿರುವಾಗ, ಒಂಟೆಗಳಂಥ ಪ್ರಾಣಿಗಳನ್ನು ತರಬೇತುಗೊಳಿಸಿ ಅವುಗಳ ಕವಾಯತು ತೋರಿಸುತ್ತಿರುವಾಗ, ಯುದ್ಧ ನೌಕೆಗಳು, ಕುದುರೆಗಳು, ವಿಮಾನಗಳು ಟ್ಯಾಂಕುಗಳು ನಮ್ಮ ದೇಶದ ಅಭಿಮಾನವನ್ನು ಮೆರೆಯುತ್ತಿರುವಾಗ ನಮ್ಮ ಧಮನಿಗಳಲ್ಲಿ, ನರ ನರಗಳಲ್ಲಿ ರಕ್ತ ಪ್ರಸರಣವು ಹೆಚ್ಚಾಗದಿದ್ದರೆ ನಾವು ಜೀವಂತ ಜನರೇ ಎಂದು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ನಮ್ಮ ಸಲುವಾಗಿಯೇ ಬದುಕಿ, ನಮ್ಮ ಸಲುವಾಗಿಯೇ ಆತ್ಮಾರ್ಪಣೆ ಮಾಡುವ ವೀರ ಯೋಧರು ತೋರುವ ವೈಭವವನ್ನು ನೋಡಿ ರೋಮಾಂಚನ ಹೊಂದಲು ಹೋಗುವವರು ಸಾಮಾನ್ಯ ಜನರಲ್ಲಿ ಸಾಮಾನ್ಯರು. ವಿಚಾರವಾದಿಗಳೆಂದು ಕರೆದುಕೊಳ್ಳುವ ವಿದ್ಯಾವಂತರು, ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾಥಿಗಳು, ಕಛೇರಿಗಳಲ್ಲಿ ಕೆಲಸ ಮಾಡುವ ನೌಕರರು ಇಂತಹ ದೇಶಾಭಿಮಾನವನ್ನು ಪ್ರೇರೇಪಿಸುವಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವದು ನಮ್ಮನ್ನು ರಕ್ಷಿಸುವ ಯೋಧರಿಗೆ ಪ್ರೋತ್ಸಾಹದಾಯಕವಾದಂತೆ, ಇವರ ಮಲಗಿದ ದೇಶಾಭಿಮಾನ, ರಾಷ್ಟ್ರ ಭಕ್ತಿಯನ್ನು ಪ್ರಚುರಗೊಳಿಸಲಾರವೇ? ಇಂತಹ ರಾಷ್ಟ್ರಾಭಿಮಾನವನ್ನು ಅನುಭವಿಸುವ ಸುಸಂಧಿಯು ಅದ್ಭುವಲ್ಲವೇ? ದೇಹ ಮನಸ್ಸುಗಳಿಗೆ ಅಂಟಿದ ನಿಷ್ಕ್ರಿಯತೆಯ ಜಾಡ್ಯವನ್ನು ಒಂದೆರಡು ಬಾರಿಯಾದರೂ ಕಿತ್ತೆಸೆಯುವ ಅವಕಾಶಗಳನ್ನು ರಾಷ್ಟ್ರೀಯ ಹಬ್ಬಗಳು ಕೊಡುವದಿಲ್ಲವೇ? ●

PAGE DONATED BY : **SMT. SHANTA V. HEGDE,** CARMICHAEL ROAD (DEC.-2010)

# ಭಾಗವತ ಮಹಾತ್ಮ್ಯೆ

ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದವರು : ಡಾ। ವಸಂತ ಭಾಗವತ ವೀಣೆ

*( ಈ ಭಾಗವತ ಕಥೆಯು ಮಕ್ಕಳಿಗಾಗಿ ಇದೆ. ಅವರಿಗೆ ಓದಲಿಕ್ಕೆ ಬರದಿದ್ದರೆ ಹಿರಿಯರು ಓದಿ ಹೇಳಬೇಕಾಗಿ ವಿನಂತಿ. )*

**ತೃಣಾವರ್ತನ ವಧೆ :**

ಪೂರ್ವದಲ್ಲಿ ಸಹಸ್ರಾಕ್ಷನೆಂಬವನು ಪಾಂಡ್ಯ ದೇಶದ ರಾಜನಾಗಿದ್ದನು. ಒಂದು ದಿನ ಅವನು ಅನೇಕ ಸ್ತ್ರೀಯರಿಂದೊಡಗೂಡಿ ನದಿಯಲ್ಲಿ ಜಲಕ್ರೀಡೆ ಮಾಡುತ್ತಿದ್ದನು. ಅಕಸ್ಮಾತ್ ಅಲ್ಲಿ ದೂರ್ವಾಸಮುನಿ ಆಗಮಿಸಿದನು. ಆದರೆ ಸಹಸ್ರಾಕ್ಷನು ಋಷಿಗೆ ಪ್ರಣಾಮವನ್ನು ಮಾಡಲಿಲ್ಲ, ನೀರಿನಿಂದ ಹೊರಗೂ ಬರಲಿಲ್ಲ. ಅವನ ಉನ್ಮತ್ತನಕ್ಕಾಗಿ ದೂರ್ವಾಸನು ''ನೀನು ಪೃಥ್ವಿಯ ಮೇಲೆ ಅಸುರನಾಗಿ ಬಾಳು. ಕೊನೆಗೆ ಶ್ರೀಕೃಷ್ಣನ ಸ್ಪರ್ಷದಿಂದ ಮುಕ್ತನಾಗು'' ಎಂದು ಶಾಪಕೊಟ್ಟನು. ಇದೇ ಸಹಸ್ರಾಕ್ಷನು ತೃಣಾವರ್ತನಾಗಿ ಹುಟ್ಟಿ ಕಂಸನ ಮಿತ್ರನಾಗಿದ್ದನು. ನಂದನ ಮಗನನ್ನು ಹಾರಿಸಿಕೊಂಡು ಹೋಗುವದಕ್ಕಾಗಿ ಬಿರುಗಾಳಿಯ ರೂಪದಿಂದ ಗೋಕುಲಕ್ಕೆ ಬಂದನು.

ಯಶೋದೆಯು ತನ್ನ ಮಗನನ್ನು ತೊಡೆಯಮೇಲೆ ಆಡಿಸುತ್ತಾ ಕುಳಿತಿದ್ದಳು. ಅಷ್ಟರಲ್ಲಿ ಕಂದನ ಭಾರವು (ತೂಕವು) ಬೆಳೆಯಹತ್ತಿತು. ಅವಳಿಗೆ ಅವನನ್ನು ತೊಡೆಯಮೇಲೆ ಕೂಡ್ರಿಸಿಕೊಳ್ಳುವುದು ಅಶಕ್ಯವಾಯಿತು. ಮಗನನ್ನು ಕೆಳಗೆ ಇಳಿಸಿ ಒಳಗೆ ಮನೆಕೆಲಸಕ್ಕೆ ಹೋದಳು. ಆಗ ಒಮ್ಮೆಲೇ ಭಯಂಕರ ಬಿರುಗಾಳಿ ಬೀಸಹತ್ತಿತು. ಸರ್ವ ಗೋಕುಲವು ಧೂಳಿನಿಂದ ಮುಚ್ಚಿಹೋಯಿತು. ಮಣ್ಣು, ಉಸಿರು ಕಣ್ಣಲ್ಲಿ, ಬಾಯಲ್ಲಿ ಹೋದದ್ದರಿಂದ ಯಾರಿಗೂ ಏನೂ ಕಾಣದಾಯಿತು. ಸ್ತ್ರೀಯರು, ಬಾಲಕರು ಚೀರಹತ್ತಿದರು. ದೊಡ್ಡವರು ಗೋಡೆಗಳ ಮತ್ತು ಗಿಡಗಳ ಆಧರದಿಂದ ನಿಂತಲ್ಲೇ ನಿಂತುಬಿಟ್ಟರು. ಎಲ್ಲೆಲ್ಲೂ ಹಾಹಾಕಾರವಾಯಿತು.

ಆಗ ಯಶೋದೆಗೆ ತನ್ನ ಮಗನು ಅಂಗಳದಲ್ಲಿ ಇದ್ದುದರ ಸ್ಮರಣೆ ಬಂತು. ಕೂಡಲೇ ಅವಳು ಆಕ್ರೋಶ ಮಾಡುತ್ತಾ ಕುರುಡಳಂತೆ ಅಲ್ಲಿ ಇಲ್ಲಿ ಧಾವಿಸಹತ್ತಿದಳು. ಅಂಗಳದಲ್ಲಿ ಕುಳಿತಿದ್ದ ಭಗವಂತನನ್ನು ಎತ್ತಿ ಆಕಾಶಕ್ಕೆ ಎತ್ತಿಕೊಂಡು ಹೋದನು. ಆಗ ಶ್ರೀಹರಿಯು ಅವನ ಕುತ್ತಿಗೆಯನ್ನೇ ಹಿಡಿದು ಹಿಚುಕಹತ್ತಿದನು. ತೃಣನೇತ್ರನಿಗೆ ಉಸಿರಾಡುವದೇ ಕಷ್ಟವಾಯಿತು. ಜೀವವು ಸಂಕಟಪಡಹತ್ತಿತು. ಕಣ್ಣು ಗುಡ್ಡೆಗಳು ಹೊರಗೆ ಬಂದವು. ಭಗವಂತನ ತೂಕವು ಹೆಚ್ಚಾಗುತ್ತಾ ಹೋಯಿತು. ತೃಣನರ್ತನು ಉಸಿರುಕಟ್ಟಿ, ಆಕಾಶದಿಂದ ದೊಪ್ಪನೆ ನೆಲಕ್ಕೆ ಬಿದ್ದು ಜೀವ ಬಿಟ್ಟನು. ಒಮ್ಮೆಲೆ ಬಿರುಗಾಳಿಯು ಇಲ್ಲದಾಯಿತು. ಕಣ್ಣು ತೆರೆದು ನೋಡಿದರೆ ಮಗುವು ಸತ್ತ ರಾಕ್ಷಸನ ಎದೆಯಮೇಲೆ ಆಡುತ್ತಲಿತ್ತು. ದುಃಖಿಸುತ್ತ ಯೆಶೋದೆಯು ಮಗನನ್ನು ಎತ್ತಿ ಅಪ್ಪಿಕೊಂಡಳು. ಎಲ್ಲರಿಗೂ ಅತ್ಯಾಶ್ಚರ್ಯವಾಯಿತು. ಈ ಶಿಶುವಿನಿಂದಲೇ ತಾವು ಮೃತ್ಯುಮುಖದಿಂದ ಬದುಕಿ ಉಳಿದೆವೆಂದು ತಿಳಿದು ಆನಂದಿಸಿದರು.

**ಯಶೋದಳಿಗೆ ಬ್ರಾಹ್ಮಾಂಡದ ದರ್ಶನ :**

ಒಂದು ದಿನ ಯಶೋದೆಯು ಕಂದನನ್ನು ತೊಡೆಯ ಮೇಲೆ ಕೂಡ್ರಿಸಿ ಆಡಿಸುತ್ತ ಕೂತಿರುವಾಗ ಸಹಜವಾಗಿ ಮಗುವಿನ ಮುಖದ ಕಡೆಗೆ ನೋಡಿದಳು. ಆಗ ಮಗುವು ಆಕಳಿಸಿತು. ಆಗ ಯೆಶೋದೆಗೆ ಮಗುವಿನ ಬಾಯಲ್ಲಿ ಚಂದ್ರ, ಸೂರ್ಯ, ತಾರೆಗಳು, ಸಮುದ್ರ, ಪರ್ವತ, ನದಿ, ಅರಣ್ಯ ಹಾಗೂ ಪ್ರಾಣಿಗಳು ಕಾಣಿಸಿದವು. ಮಗುವಿನ ಬಾಯಲ್ಲಿ ಸರ್ವವಿಶ್ವವನ್ನೇ ಕಂಡಿದ್ದರಿಂದ ಯಶೋದೆಗೆ ನಡುಕ ಹುಟ್ಟಿತು. ಅವಳು ಭೀತಿಯಿಂದ ಕಣ್ಣು ಮುಚ್ಚಿದಳು. ಹೀಗೆ ಮಾಡಿದರೆ, ಯಶೋದೆಯು ಗಾಬರಿಯಾಗಬಹುದೆಂದು ಭಗವಂತನು ಮಾಯೆಯನ್ನು ಆವರಿಸಿದನು. ಯಶೋದ ಪುನಃ ಕಣ್ಣು ತೆರೆದು ನೋಡಲಾಗಿ ಮಗು ಅವಳ ಕಡೆ ನೋಡುತ್ತ ನಗುತ್ತಲಿದ್ದನು.

**ನಾಮಕರಣ :**

ಅನುದಿನಗಳಲ್ಲಿ ವಸುದೇವನ ವಿನಂತಿಯ ಮೇರೆಗೆ ಯಾದವರ ಪುರೋಹಿತ ಮಹಾತಪಸ್ವಿ ಗರ್ಗಾಚಾರ್ಯನು ಗೋಕುಲಕ್ಕೆ ಬಂದನು. ನಂದನು ಅತ್ಯಂತ ಹರ್ಷದಿಂದ ಅವನಿಗೆ ಸ್ವಾಗತ ಮಾಡಿದನು. ಅವನ ಪೂಜೆ ಮಾಡಿ, ಕೈ ಮುಗಿದು ಮಹಾರಾಜ ತಮ್ಮ ಆಶೀರ್ವಾದದಿಂದ ಹಾಗೂ ಭಗವಂತನ ಕೃಪೆಯಿಂದ ನನಗೆ ಪುತ್ರರತ್ನ ಪ್ರಾಪ್ತವಾಗಿದೆ ಹಾಗೂ ವಸುದೇವನ ಪತ್ನಿ ರೋಹಿಣಿಗೂ ಪುತ್ರರತ್ನವಾಗಿದೆ. ಈ ಇಬ್ಬರೂ ಬಾಲಕರ ನಾಮಕರಣ ಸಂಸ್ಕಾರ ಮಾಡಿ ಅವರ ಗ್ರಹಮಾನ ಹಾಗೂ ಜಾತಕವನ್ನು ನೋಡಿರಿ ಎಂದು ವಿನಂತಿಮಾಡಿಕೊಂಡನು.

ಗರ್ಗಾಚಾರ್ಯನು ಆನಂದದಿಂದ 'ಒಳ್ಳೇದು, ನಾನು ಹೇಳುವುದನ್ನು ಕೇಳು, ನಾನು ಯಾದವರ ಪುರೋಹಿತನೆಂದು ಎಲ್ಲರಿಗೂ ಗೊತ್ತಿದೆ. ನಾನು ಈ ಮಕ್ಕಳ ಸಂಸ್ಕಾರ ಮಾಡಿದೆನೆಂದು ಕಂಸನಿಗೆ ತಿಳಿದರೆ ಅನರ್ಥವಾದೀತು. ದೇವಕಿಗೆ ಎಂಟನೇ ಗರ್ಭವು ಕನ್ಯಾ ಹೇಗೆ ಆಯಿತೆಂದು ಇನ್ನೂ ಸಾಶಂಕನಾಗಿರುವನು. ಕಾರಣ ಏನೂ ಆಡಂಬರವಿಲ್ಲದೆ ಯಾರಿಗೂ ಗೊತ್ತಾಗದಂತೆ ಗುಪ್ತರೀತಿಯಿಂದ ನಾಮಕರಣ ಸಂಸ್ಕಾರ ಮಾಡಬೇಕು ಎಂದನು. ಅದಕ್ಕೆ ನಂದನು ಒಪ್ಪಿ ಏಕಾಂತದಲ್ಲಿ ಕೂಡುವ ಸರ್ವ ವ್ಯವಸ್ಥೆ ಮಾಡಿದನು.

ನಾಮಕರಣಕ್ಕಾಗಿ ರೋಹಿಣಿ ಹಾಗೂ ಯಶೋದಾ ತಮ್ಮ ತಮ್ಮ ಮಕ್ಕಳನ್ನು ತೊಡೆಯ ಮೇಲೆ ಕೂಡ್ರಿಸಿಕೊಂಡು ಆಚಾರ್ಯರ ಎದುರಿಗೆ ಕುಳಿತರು ತ್ರಿಲೋಕ್ಯನಾಥ ಸರ್ವೇಶ್ವರ, ಲಕ್ಷ್ಮಿಪತಿ ಭಗವಂತನನ್ನು ಯಶೋದೆಯ ತೊಡೆಯ ಮೇಲೆ ಹಾಗೂ ಶೇಷ ಭಗವಾನನನ್ನು ರೋಹಿಣಿಯ ತೊಡೆಯಮೇಲೆ ನೋಡಿ ಗರ್ಗಾಚಾರ್ಯನ ಮನಸ್ಸು ಪುಲಕಿತವಾಯಿತು. ಅನನ್ಯ ಭಕ್ತಿ ಭಾವದಿಂದ ಮನಸ್ಸಿನಲ್ಲೇ ನಮಸ್ಕಾರ ಮಾಡಿ ''ಭಗವಂತಾ, ಬ್ರಹ್ಮಾಂಡ ನಾಯಕ ನಿನಗೆ ಅನಂತ ಪ್ರಣಾಮಗಳು. ಪೌರೋಹಿತ್ಯವು ಇಂದು ಸಾರ್ಥಕವಾಯಿತು. ನನ್ನ ಇಂದು ನಿನ್ನ ಜಾತಕ ಹೇಳುವ ಭಾಗ್ಯ ನನಗೆ ಪ್ರಾಪ್ತವಾಗಿದೆ. ಅನಂತ, ಅನಾದಿ ಪರಬ್ರಹ್ಮನ ಜಾತಕವನ್ನು ಯಾರಿಗೆ ಹೇಳಲು ಸಾಧ್ಯ? ಪ್ರಭು ನನ್ನ ಕ್ಷಮಿಸು, ಕೃಪೆಯಿಂದ ನನ್ನ ಸೇವೆಯನ್ನು ಸ್ವೀಕರಿಸು'' ಎಂದನು.

ಗರ್ಗಾಚಾರ್ಯನು ಪಂಚಾಂಗವನ್ನು ಬಿಚ್ಚಿನು. ಯಶೋದೆಯ ಮಗು ನಗುತ್ತಿದ್ದರೆ, ರೋಹಿಣಿಯ ಮಗು ಗರ್ಗಾಚಾರ್ಯನನ್ನು ಕೆಕ್ಕರಿಸಿ ನೋಡುತ್ತಿತ್ತು. ಗರ್ಗಾಚಾರ್ಯನು ಮನಸ್ಸಿನಲ್ಲಿ ಅಂಜಿದನು. ಎಷ್ಟೆಂದರೂ ನಾಗರ ಜಾತಿ ! ಡಂಶು ಹಿಡಿಯುವದರಲ್ಲಿ ನಾಗವು ಪ್ರಸಿದ್ಧವಿರುತ್ತದೆ. ಗರ್ಗಾಚಾರ್ಯನು ''ರೋಹಿಣಿಯ ಮಗನು ದೊಡ್ಡವನಿದ್ದಕಾರಣ ಅವನ ಭವಿಷ್ಯವನ್ನು ಮೊದಲು ಹೇಳಬೇಕಾಗುತ್ತದೆ. ಇವನು ಅತ್ಯಂತ ಬಲವಾನನಾಗುವನು. ಇವನ ಬಲದ ಅಂತವೆ ಹತ್ತಲಾರದು. ಅದರಿಂದ ಇವನಿಗೆ 'ಬಲ' ಎನ್ನುವುದು ಸರ್ವರನ್ನೂ ರಮಿಸುವದರಿಂದ 'ರಾಮ'ನೆಂದು ಹೇಳುತ್ತಾರೆ. ಹೀಗೆ ಜಗತ್ತಿನಲ್ಲಿ ಬಲರಾಮ ಎಂಬ ಹೆಸರಿನಿಂದ ಪ್ರಸಿದ್ಧನಾಗುವನು. ಸರ್ವರನ್ನೂ ಆಕರ್ಷಣೆ ಮಾಡುವದರಿಂದ ಸಂಕರ್ಷಣನೆಂದು ಹೇಳುವರು. ಇವನು ಯಾರ ಹತ್ತಿರ ಇರುವನೋ ಅವನಿಗೆ ಕಾಲದ ಭೀತಿಯೂ ಇರುವದಿಲ್ಲ'' ಎಂದು ಹೇಳಿದನು.

''ಇನ್ನು ಈ ಎರಡನೇ ಮಗು ಕೃಷ್ಣ ವರ್ಣದವನಿರುವದರಿಂದ ಇವನಿಗೆ ಕೃಷ್ಣನೆಂದು ಅನ್ನುವುದು. ಕೆಲವರು ವಾಸುದೇವನೆಂದು ಕರೆಯುತ್ತಾರೆ. ಈತನ ಹೆಸರು ಹಾಗೂ ಕರ್ಮಗಳು ಅನೇಕವಿದ್ದಕಾರಣ ಯಾರೂ ಅಂಟಲು ಅಸಮರ್ಥರಾಗಿರುವರು. ಇವನ ಚರಣಗಳಲ್ಲಿ ಲಕ್ಷ್ಮಿಯೂ ವಾಸಿಸುತ್ತಾಳೆ. ಇವನು ದುಷ್ಟರ ನಾಶ ಮಾಡುವನು. ಪ್ರತ್ಯಕ್ಷ ಪರಮೇಶ್ವರನೇ ಇದ್ದ ಇವನ ಆಶ್ರಯದಿಂದ ಸರ್ವಸಂಕಂಟಗಳಿಂದ ನೀವೆಲ್ಲರೂ ಪಾರಾಗುವಿರಿ'' ಎಂದು ಹೇಳಿದನು. ನಂದನಿಗೆ ಅತಿ ಆನಂದವಾಯಿತು. ಸರ್ವರಿಗೂ ಸಕ್ಕರೆಯನ್ನು ಹಂಚಿದನು. ಬಾಲಗೋಪಾಲಕರಿಗೆ, ರೋಹಿಣಿಯ ಮಗನಿಗೆ ಬಲರಾಮನೆಂದೂ ಹಾಗೂ ತನ್ನ ಮಗನಿಗೆ ಕೃಷ್ಣನೆಂದೂ ಕರೆಯಬೇಕೆಂದು ಹೇಳಿದನು.

*( ಮುಂದುವರಿಯುವುದು )*

*PAGE DONATED BY : **SMT. RAJESHWARI P. GUNISHASTRI**, GOKARN, PRABHADEVI IN THE MEMORY OF **LATE SHRI P. V. GUNISHASTRI** OUR PAST PRESIDENT OF "HAVYAKA" (DEC.-2010)*

# ಕರ ನಿರಾಕರಣೆ ಚಳುವಳಿಯಲ್ಲಿ ನಮ್ಮ ಮಹಿಳೆಯರು

**- ಡಾ। ವಿಜಯ ನಳಿನಿ ರಮೇಶ್**

ಹವ್ಯಕವ್ಯಗಳಿಗೆ ಪರಿಕರಗಳನ್ನು ಜೋಡಿಸುವುದು, ಕೃಷಿ ಕಾರ್ಯಗಳಿಗೆ ನೆರವಾಗುವುದು, ಅಡುಗೆ, ಆತಿಥ್ಯ, ಹಿರಿಯರ ಲಾಲನೆ, ಪಶು ಪ್ರಾಣಿಗಳ ಪಾಲನೆ, ಮಕ್ಕಳು-ಮರಿಗಳ ಪೋಷಣೆ, ವ್ರತ-ಕಥೆ, ಕಾರ್ಯ-ಕಟ್ಲೆ ಗಳಿಗಾಗಿ ಸಿದ್ಧತೆ ನಿರ್ವಹಣೆ - ಹೀಗೆ ನೂರೆಂಟು ಕೆಲಸಗಳ ಒತ್ತಡದಲ್ಲಿರುವ ಹವ್ಯಕ ಮಹಿಳೆ ಈ ಎಲ್ಲ ದೈನಿಕಗಳ ನಡುವೆಯೂ ಸಹ ತನ್ನೆಲ್ಲ ಮಿತಿಗಳನ್ನೂ ಮೀರಿ ಮಹಾತ್ಮಾಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದು ಒಂದು ಮಹಾಸಾಹಸದ ಕಥೆಯಾಗಿದೆ. ಉಪ್ಪಿನ ಸತ್ಯಾಗ್ರಹ, ಜಂಗಲ್ ಸತ್ಯಾಗ್ರಹ, ವಿದೇಶೀ ವಸ್ತ್ರ ಬಹಿಷ್ಕಾರಗಳಂತಹ ಕಠಿಣವಾದ ಚಳವಳಿಗಳಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ ಇವೆಲ್ಲವುಗಳಿ ಗಿಂತ ಭಯಾನಕವಾದ ಸತ್ಯಾಗ್ರಹಿಗಳ ಪಾಲಿನ 'ಅಗ್ನಿ ಪರೀಕ್ಷೆ' ಎಂದೇ ಕರೆಸಿಕೊಂಡ 'ಕರ ನಿರಾಕರಣೆ' ಚಳವಳಿಯಲ್ಲಿ ಅಳುಕದೆ, ಅಂಜದೆ ಮುನ್ನುಗ್ಗಿ ತಮ್ಮ ಧೈರ್ಯ ಸಾಹಸಗಳನ್ನು ಮೆರೆದಿದ್ದ ಸ್ವಾತಂತ್ರ್ಯ ಚಳವಳಿಯ ಒಂದು ರೋಮಾಂಚಕಾರೀ ಅಧ್ಯಾಯವಾಗಿದೆ.

ನಮ್ಮ ವೀರ ವನಿತೆಯರ ಇಂತಹ ಸಾಹಸಗಾಥೆಯ ಕೆಲವು ಘಟನೆಗಳನ್ನು ನಮ್ಮ ಹೊಸ ಪೀಳಿಗೆಯ ಯುವತಿಯರ ಸ್ಫೂರ್ತಿಗಾಗಿ ಎತ್ತಿ ಕೊಡಲಾಗಿದೆ.

ಸ್ವತಃ ಮರವೊಂದನ್ನು ಕಡಿದು ಅದರ ರೆಂಬೆಯೊಂದನ್ನು ಕೈಯಲ್ಲಿ ಹಿಡಿದು ಮಹಿಳೆಯೊಬ್ಬಳು ಪೊಲೀಸರೆದುರಿಗೆ ತನ್ನನ್ನು ಬಂಧಿಸಲು ಆಮಂತ್ರಣ ನೀಡಿದಳು. ಅವರು ಬಂಧಿಸದೇ ಇದ್ದಾಗ 'ಜಂಗಲ ಕಾಯಿದೆ ಭಂಗ ಮಾಡಿದ ನನ್ನನ್ನು ಬಂಧಿಸದೆ ಅನ್ಯಾಯ ಮಾಡಿದ್ದಾರೆ. ನಾವು ಹೆಂಗಸರೇ ಕಾಯಿದೆ ಭಂಗ ಮಾಡುವೆವು' ಎಂದು ಸಾರಿ ಅಧಿಕಾರಿಗಳಿಗೆ ಕುಂಕುಮ ಹಚ್ಚಿದಳು. ಇದು ಸಿರಸಿಯ ಬಳಿಯ ಎಕ್ಕಂಬಿ ಶಾಮಭಟ್ಟರ ಪತ್ನಿ ಜಂಗಲ್ ಕಾಯ್ದೆ ಭಂಗ ಮಾಡಿದ ಪ್ರಸಂಗ. 1930ರ ಸುಮಾರಿಗೆ ನಮ್ಮ ದೇಶಾದ್ಯಂತ ಮಹಾತ್ಮಾಜಿಯವರ ನೇತೃತ್ವದಲ್ಲಿ ಅಸಹಕಾರ ಸತ್ಯಾಗ್ರಹ ತನ್ನ ಕಾವನ್ನು ಏರಿಸಿಕೊಳ್ಳುತ್ತಿದ್ದಂತಹ ಸಮಯದಲ್ಲಿ ಸತ್ಯಾಗ್ರಹ ಮಂಡಲದ ಸದಸ್ಯರು "ಸಾಮೂಹಿಕ ಸವಿನಯ ಕಾಯ್ದೆ ಭಂಗವನ್ನು ಪ್ರಚಂಡ ಪ್ರಮಾಣದಲ್ಲಿ ಕೈಗೊಳ್ಳಲು ಉತ್ತರ ಕನ್ನಡ ಜಿಲ್ಲೆಯಷ್ಟು ಸರ್ವ ವಿಧದಿಂದಲೂ ಅನುಕೂಲವಾದ ಕ್ಷೇತ್ರ ಬೇರೊಂದಿಲ್ಲ" ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕೌನ್ಸಿಲಿಗೆ ವರದಿ ಮಾಡಿದ್ದರು. ಅಂತೆಯೇ ರಂ.ರಾ. ದಿವಾಕರ್, ಸರ್ದಾರ್ ವೆಂಕಟರಮಣಯ್ಯ ಮುಂತಾದವರ ನಿರ್ದೇಶನದಲ್ಲಿ ಈ ಜಿಲ್ಲೆಯ ಪುರುಷರು ಮಾತ್ರವಲ್ಲ, ವೆಂಕಟರಮಣಯ್ಯನವರ ಪತ್ನಿ ಗೌರಮ್ಮನವರ ನೇತೃತ್ವದಲ್ಲಿ ಮಹಿಳೆಯರೂ ದೊಡ್ಡ ಪ್ರಮಾಣದಲ್ಲಿ ಈ ಚಳವಳಿಯಲ್ಲಿ ದುಮುಕಿದರು. ಈ ಜಿಲ್ಲೆಯ ಘಟ್ಟದ ಮೇಲಿನ ಭಾಗದಲ್ಲಿ ನಡೆದ ಇಂತಹ ಚಳುವಳಿಗಳಲ್ಲಿ ಭಾಗವಹಿಸಿದವರು ಹೆಚ್ಚಾಗಿ ಹವ್ಯಕ ಮಹಿಳೆಯರೇ ಆಗಿದ್ದುದು ಒಂದು ವಿಶೇಷ. ಉಳಿದೆಲ್ಲ ಚಳವಳಿಗಳಿಗಿಂತ ಕರ ಬಂದಿ ಸತ್ಯಾಗ್ರಹವು ತುಂಬಾ ಕಠೋರವಾದುದುದಾಗಿತ್ತು. ಸ್ವತಹ ಸಂಘಟಕರೇ ಆ ಕುರಿತು ಹೀಗೆ ಎಚ್ಚರಿಕೆ ನೀಡಿದ್ದರು. "ಕರ ಬಂದಿ ಸಂಗ್ರಾಮವು ಘೋರವಾದ ಸಂಗ್ರಾಮವೆಂಬುದು ನಿಸ್ಸಂದೇಹ ಎಂದರೆ ಸರಕಾರದ ಪ್ರಾಣವನ್ನೇ ಶೂಲಕ್ಕಿಕ್ಕುವುದು. ಅಂಥ ಪ್ರಸಂಗದಲ್ಲಿ ಸರಕಾರವು ಏನು ಮಾಡಬಹುದು, ಏನು ಮಾಡಲಿಕ್ಕಿಲ್ಲ ಇದನ್ನು ಹೇಳುವುದು ಕಠಿಣ. ಆದರೆ ಕರ ನಿರಾಕರಣೆ ಮಾಡುವವರು ಸುಸಂಘಟಿತರಾಗಿ, ಬರುವ ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸುವುದಾದರೆ ಯಶಸ್ಸು ಕಟ್ಟಿಟ್ಟದ್ದು."



'ಪರಿಸ್ಥಿತಿ ಎಷ್ಟೇ ಉದ್ವೇಗಕಾರಕವಾದರೂ ಅಹಿಂಸಾ ವ್ರತವನ್ನು ಮನೋವಾಕ್ಕಾಯಗಳಿಂದ ಪಾಲಿಸುವ ನಿರ್ಧಾರ ಅಗತ್ಯ' ಎಂದು ರಂ.ರಾ. ದಿವಾಕರರು ಹೇಳಿದ್ದರು.

ಗಾಂಧಿ-ಆಯರ್ವಿನ್ ಒಪ್ಪಂದದ ನಂತರ ದೇಶದ ಬೇರೆ ಬೇರೆ ಭಾಗಗಳಲ್ಲಿ ಕರ ನಿರಾಕರಣೆ ಚಳವಳಿಯನ್ನು ಹಿಂತೆಗೆದುಕೊಳ್ಳಲಾಗಿತ್ತಾದರೂ 1931ರಲ್ಲಿ ಆರ್ಥಿಕ ಕಾರಣದಿಂದಾಗಿ ಕರ ನಿರಾಕರಣೆ ಮಾಡುವುದು ಸಿರಸಿ-ಸಿದ್ಧಾಪುರ ತಾಲೂಕುಗಳವರಿಗೆ ಅನಿವಾರ್ಯವಾಗಿತ್ತು. ಭೂ ಕಂದಾಯ ತೆರುವ ಸಾಮರ್ಥ್ಯವಿರಲಿಲ್ಲ. ಸಕಾಲಕ್ಕೆ ಮಳೆ ಬೀಳಲಿಲ್ಲ. ಭತ್ತದ ಬೆಳೆ ಸರಿಯಾಗಿ ಬರಲಿಲ್ಲ. ಅಡಿಕೆ ಬೆಳೆಗೆ ಕೊಳೆ ರೋಗ ತಗಲಿ ಬೆಳೆ ಹಾಳಾಯಿತು. ಮೇಲಾಗಿ ಅಡಿಕೆಯ ಧಾರಣೆಯು ಒಮ್ಮೆಲೆ ಕುಸಿದು ಬಿತ್ತು. ಮಾತ್ರವಲ್ಲ, ಕಾಡು ಹಂದಿಗಳ ಉಪದ್ರವ, ಕಾಡಾನೆ ಹಾವಳಿ, ಮಂಗಗಳ ಉಪದ್ರವ, ಬಂದೂಕುಗಳ ಲೈಸೆನ್ಸ್ ಅಭಾವ, ಅನಾರೋಗ್ಯಕರ ಹವೆ, ಮಲೇರಿಯಾ ರೋಗ ಪ್ರಸಾರ ಇವೆಲ್ಲವುಗಳಿಂದ ಜನಸಂಖ್ಯೆಯ ಇಳಿಕೆ. ಕೂಲಿಯಾಳುಗಳ ಸಮಸ್ಯೆ, ಕೂಲಿಯ ದರ ಏರಿಕೆ, ಈ ಎಲ್ಲ ಕಾರಣದಿಂದಾಗಿ ರೈತರು ಕಂದಾಯ ವಸೂಲಿಯಲ್ಲಿ ರಿಯಾಯ್ತಿಗಾಗಿ ಮೊರೆ ಇಟ್ಟರು. ಅಧಿಕಾರಿಗಳು ಕಿವಿಗೊಡದೆ, ಸಹಾನುಭೂತಿ ತೋರದೆ ಉಗ್ರ ಧೋರಣೆ ತಾಳಿದ್ದರಿಂದಾಗಿ ಕರ ನಿರಾಕರಣೆಯ ಆಂದೋಲನವು ಆರಂಭವಾಯಿತು. ಅಧಿಕಾರಿಗಳು ನಿರ್ದಯವಾಗಿ ಕ್ರೂರವಾಗಿ ತಮ್ಮ ಜಪ್ತಿ ಸತ್ರಗಳನ್ನು ಆರಂಭಿಸಿದರು. ಜಪ್ತಿಯಾದ ಮಾಲುಗಳನ್ನು ಯಾರೂ ಕೊಳ್ಳದಂತೆ ಸತ್ಯಾಗ್ರಹಿಗಳು ಪಿಕೆಟಿಂಗ್ ಆರಂಭಿಸಿದರು. ಇಲ್ಲಿ ಹವ್ಯಕ ಜನಾಂಗದವರ ಹಾಗೂ ಮಹಿಳೆಯರ ಪಾತ್ರ ಮಹತ್ವದ್ದಾಗಿತ್ತು. 'ಹವ್ಯಕರೆಲ್ಲ ರಾಷ್ಟ್ರೀಯ ಭಾವನೆಯಿಂದ ಪ್ರೇರಿತರಾಗಿರುವರು. ಅವರು ಮಹಾತ್ಮಾಜಿಯವರ ಪರಮ ಭಕ್ತರಿರುವರು' ಎಂದು ಜಮನಾಲಾಲ ಬಜಾಜಜರರು ಅಭಿಪ್ರಾಯ ಪಟ್ಟರು. ಮಾತ್ರವಲ್ಲ, ಅಧಿಕಾರಿಗಳ ಜಪ್ತಿಗೆ ವಿಶೇಷವಾಗಿ ತುತ್ತಾದವೂ ಸಹ ಹವ್ಯಕರ ಮನೆಗಳೇ ಆಗಿದ್ದವು ಎಂಬುದು ಗಮನಿಸಬೇಕಾದ ಸಂಗತಿ. "ಅಧಿಕಾರಿಗಳು ಹವೀಕ ಬ್ರಾಹ್ಮಣರ ಮನೆಗಳನ್ನಷ್ಟೇ ಜಪ್ತಿ ಮಾಡುವ ಧೋರಣೆಯನ್ನಿಟ್ಟುಕೊಂಡುದು ಹಾಗೂ ಜಪ್ತಿಯಲ್ಲಿ ನಿತ್ಯ ಬಳಕೆಯ ಪಾತ್ರೆ, ಊಟಕ್ಕೆಂದು ಇಟ್ಟ ಅಕ್ಕಿ, ಬೆಲ್ಲ ಇವುಗಳಲ್ಲದೆ ಹಿಂಡುವ ದನಗಳ ಮೇಲೆ ವಿಶೇಷ ಕಟಾಕ್ಷವಿದ್ದುದು ಕಂಡು ಬಂದಿತು."

ಇಂತಹ ಪರಿಸ್ಥಿತಿಯಲ್ಲಿ, ಸತ್ಯಾಗ್ರಹದಲ್ಲಿ ಈಗಾಗಲೇ ತಮ್ಮನ್ನು ತೊಡಗಿಸಿಕೊಂಡಿದ್ದ ದೊಡ್ಮನೆ ಮಹಾದೇವಮ್ಮ (ಮಹಾದೇವಿ ತಾಯಿ), ಸ್ವತಃ ವಿಧವಾ ವಿವಾಹ ಮಾಡಿಕೊಂಡು ವಿಧವಾ ವಿವಾಹ ಪ್ರಚಾರದಲ್ಲಿ ತೊಡಗಿದ್ದ ಮಹಾಕಾಳಮ್ಮ ಅಕದಾಸ್ ಇವರೆಲ್ಲರ ಸ್ಫೂರ್ತಿಯೊಂದಿಗೆ ಸಿರಸಿ-ಸಿದ್ಧಾಪುರ ತಾಲೂಕಿನ ಮಹಿಳೆಯರೂ ಸಹ ಧೈರ್ಯ ದಿಂದ ಜಪ್ತಿಗಳನ್ನು ಎದುರಿಸತೊಡಗಿದರು. ಜಪ್ತಿಯ ಮಾಲುಗಳನ್ನು ಕೊಳ್ಳದಂತೆ ಕೊಳ್ಳುತ್ತಿದ್ದವರ ಮನೆಯೆದುರು ಧರಣಿ, ಉಪವಾಸ ಸತ್ಯಾಗ್ರಹಗಳನ್ನು ಆರಂಭಿಸಿದರು. ಗುದ್ದು, ಲಾಠಿಯೇಟು, ಪೊಲೀಸರ ದೌರ್ಜನ್ಯಗಳನ್ನು ಲೆಕ್ಕಿಸದೆ ತಮ್ಮ ಧೈರ್ಯ, ಛಲ ಸಂಕಲ್ಪಗಳನ್ನು ಪ್ರದರ್ಶಿಸಿದ ಪ್ರಸಂಗಗಳು ಹಲವಾರು, ಅವುಗಳಲ್ಲಿ ಕೆಲವನ್ನಿಲ್ಲಿ ನೋಡ ಬಹುದು.

*(ಮುಂದುವರಿಯುವುದು)*

*PAGE DONATED BY : **SHRI V. G. BHAT, NIGDI** (DEC.-2010)*

# ಭಾಸ ಬೋಧ

– ಪ್ರೊ। ವಿಷ್ಣು ಜೋಶಿ, ಕುಮಟಾ

## ಪ್ರತಿಜ್ಞಾ ಭಂಗವು ಪಾತಕ

**''ಪ್ರತಿಜ್ಞಾ ಹಾನಿಃ ಪಾತಕ ಮಿತಿ ಸತಾಂ ಸಂಪ್ರದಾಯಃ''**
**( ಯಜ್ಞಫಲ ಅಂಕ 2 )**

ಪ್ರತಿಜ್ಞಾ ಭಂಗವನ್ನು ಪಾತಕವೆಂದು ಪ್ರಾಜ್ಞರು ಪರಿಗಣಿಸುತ್ತಾರೆ.

ರಾಮಾಯಣದ ಅಯೋಧ್ಯಾಕಾಂಡದಲ್ಲಿ ಒಂದು ಮನೋಜ್ಞ ಸನ್ನಿವೇಶ. ಯಜ್ಞ ರಕ್ಷಣೆಗಾಗಿ ರಾಮ-ಲಕ್ಷ್ಮಣರನ್ನು ಕರೆದೊಯ್ಯಲು ಕುಲ- ಗುರುಗಳಾದ ವಿಶ್ವಾಮಿತ್ರರು ದಶರಥನ ಅರಮನೆಗೆ ಆಗಮಿಸುವ ಸಂದರ್ಭ, ಬಂದ ವಿಶ್ವಾಮಿತ್ರರನ್ನು ಯಥೋಚಿತವಾಗಿ ಸತ್ಕರಿಸಿದ ದಶರಥ ನನ್ನಿಂದ ಏನಾಗಬೇಕು, ಆಜ್ಞೆ ಮಾಡಬೇಕು. ಶಿರಸಾವಹಿಸಿ ನೆರವೇರಿಸುತ್ತೇನೆ ಎಂದು ವಾಗ್ದಾದ ಮಾಡುತ್ತಾನೆ. ವಿಶ್ವಾಮಿತ್ರರು ರಾಮ-ಲಕ್ಷ್ಮಣರನ್ನು ಯಜ್ಞ ರಕ್ಷಣೆಗಾಗಿ ಕಳುಹಿಸಬೇಕು ಎಂದು ಹೇಳಿದಾಗ ದಶರಥ'ನಿಗೆ ಪುತ್ರವ್ಯಾಮೋಹ ಜಾಗೃತವಾಗುತ್ತದೆ. ಪೂಜ್ಯರೇ ನಾನೇ ಬೇಕಾದರೆ ಬರುತ್ತೇನೆ.

**''ಊನ ಷೋಡಶವರ್ಷೋಯಂ ರಾಮೋऽऽರಾಜೀವ ಲೋಚನಃ''**

''ಅಯ್ಯೋ। ನನ್ನ ಮಗನಿಗೆ ಇನ್ನೂ ಹದಿನಾರು ತುಂಬಿಲ್ಲ'' ಎಂದು ನುಡಿಯುತ್ತಾನೆ, ಆಗ ವಿಶ್ವಾಮಿತ್ರರು

**''ಮಿಥ್ಯಾ ಪ್ರತಿಜ್ಞ ಕಾಕುತ್ಸ್ಥ ಸುಖೀಭವ ಸಭಾಂಧವಃ''**

ದಶರಥ-ಕಕುವಿನ ವಂಶದಲ್ಲಿ ಕೊಟ್ಟಮಾತಿಗೆ ತಪ್ಪಿದವರೇ ಇಲ್ಲ. ಇಂದಿನ ನಿನ್ನ ವರ್ತನೆಯಿಂದ ಆ ಅಪಯಶಸ್ಸಿಗೆ ನೀನು ಪಾತ್ರನಾಗುತ್ತಿರುವೆ. ಬಂಧು-ಬಾಂಧವರ ಸಂಗಡ ಸುಖವಾಗಿರು ಎಂದು ಸಭೆಯಿಂದ ಹೊರಡಲು ಉದ್ಯುಕ್ತರಾದಾಗ ತನ್ನ ತಪ್ಪಿನ ಅರಿವಾದ ದಶರಥ ಮಕ್ಕಳನ್ನು ವಿಶ್ವಾಮಿತ್ರರ ಸಂಗಡ ಕಳುಹಿಸುತ್ತಾನೆ.

ಪ್ರತಿಜ್ಞೆಗೆ ಭಂಗ ಬಂದರೆ ಅದು ಮಹಾಪಾಪ ಎನ್ನುವ ಪ್ರಜ್ಞೆ ಭಾರತೀಯ ಸಂಸ್ಕೃತಿಯಲ್ಲಿಯೇ ಇದೆ. ಕೊಟ್ಟ ಮಾತಿಗೆ ತಪ್ಪಿ ನಡೆಯಬಾರದು.

ಕೆಲವರು ಯಾಕೆ ಹಲವರು ಇಂದಿನ ನಮ್ಮ ಮಂತ್ರಿಗಳಂತೇ ಆಶ್ವಾಸನೆಯನ್ನೇನೋ ಧಾರಾಳವಾಗಿ ಕೊಡುತ್ತಾರೆ. ಅದರೆ ಅಷ್ಟೇ ಬೇಗನೆ ಮರೆಯುತ್ತಾರೆ. ಇಂತವರ ವ್ಯಕ್ತಿತ್ವ ಹಗುರಾಗುತ್ತದೆ. ಕೆಲವರಿಗೆ ಅವರು ಇಂತಹ ಪ್ರತಿಜ್ಞೆ ಮಾಡಿದ್ದಾರೆ ಎಂದು ನೆನಪಿಸಿ ಕೊಡಲು ಬೇರೆಯವರು ಬೇಕು. ಅಷ್ಟರ ಮಟ್ಟಿಗೆ ಆಡಿದ ಮಾತಿನ ಬಗ್ಗೆ ಅವನಿಗೆ ಅಲಕ್ಷ್ಯ ಇರುತ್ತದೆ.

ಅನೇಕ ವ್ಯವಹಾರಗಳಂತೆ ಮಾತಿನ ವ್ಯವಹಾರವನ್ನು ಹದಗೆಡಿಸಿಕೊಂಡರೆ ವಿಶ್ವಾಸ ಭೂಮಿಯೇ ಕುಸಿಯುತ್ತದೆ. ಇದರಿಂದ ಲೌಕಿಕವಾಗಿ ಅನೇಕ ಕೆಲಸಗಳು ಜಟಿಲ ಆಗುತ್ತದೆ.

ನಮ್ಮಿಂದ ಆಗದೇ ಇರುವ ಪೊಳ್ಳು ಭರವಸೆಯನ್ನು ಕೊಟ್ಟು ಯಾರನ್ನು ನಂಬಿಸಬಾರದು. ನಮ್ಮಿಂದ ಆಗದೇ ಇದ್ದರೆ ಅದು ನಮ್ಮ ಸಾಮರ್ಥ್ಯಕ್ಕೆ ಮೀರಿದ್ದು ಎಂದು ನೇರವಾಗಿ ಹೇಳಿದರೂ ಅವರ ಗೌರವ ಉಳಿಯುತ್ತದೆ. ಕೊಟ್ಟಮಾತಿಗೆ ತಪ್ಪಿನಡೆದರೆ ಪರಮಾತ್ಮನ ಅಂಶವಾದ ಆತ್ಮ ಒಪ್ಪುವುದಿಲ್ಲ. ಇದನ್ನೇ-ಆತ್ಮಸಾಕ್ಷಿಯ ಚುಚ್ಚುವಿಕೆ ಎಂದು ಕರೆಯಲಾಗಿದೆ.

**ಶುಭಂ ವಾ ಯದಿ ವಾ ಪಾಪಂ ಯೋಹಿ ವಾಕ್ಯಮುದೀರಿತಮ್।**
**ಸತ್ಯೇನ ಪರಿಗೃಹ್ಣಾತಿ ಸ ಧೀರ ಪುರುಷೋತ್ತಮಃ॥**

ಅಂದರೆ ಒಳ್ಳೆಯದೋ ಕೆಟ್ಟದ್ದೋ ಒಮ್ಮೆ ಮಾತನಾಡಿದ ನಂತರ ಸತ್ಯಕ್ಕೆ ಬೆಲೆಕೊಟ್ಟು ಆಡಿದ ಮಾತನ್ನು ನಡೆಸಿಕೊಡಬೇಕು. ಅಂತವನು ಪುರುಷೋತ್ತಮ ಎನ್ನಿಸಿಕೊಳ್ಳುತ್ತಾನೆ. ಮಾತಿಗೆ ತಪ್ಪಿದವರು ಅವರು ಎಷ್ಟೇ ದೊಡ್ಡವರಾದರೂ ಪುರುಷಾಧಮರೇ ಸರಿ. ●

# ಹಾಸ್ಯ-ಲಾಸ್ಯ

- ಒಂದು ಸಲ ಸ್ಕೂಲ್ ಟೀಚರ್ ಟ್ರಾಫಿಕ್ ಸಿಗ್ನಲ್ ನಿಯಮವನ್ನು ಉಲ್ಲಂಘಿಸಿದ್ದಕ್ಕಾಗಿ ಕೋರ್ಟ್‌ನಲ್ಲಿ ನ್ಯಾಯಾಧೀಶರ ಮುಂದೆ ಹಾಜರಿ ಪಡಿಸಲಾಯಿತು. ನ್ಯಾಯಾಧೀಶರಿಗೆ ತನಗೆ ಕಲಿಸಿದ ಟೀಚರ್‌ನ್ನು ನೋಡಿ ತುಂಬಾ ಖುಷಿಯಾಯಿತು. ಅವರ (ಟೀಚರ್) ತಪ್ಪಿಗೆ ನ್ಯಾಯಾಧೀಶರು ತೀರ್ಪನ್ನಿತ್ತರು- ''ಮೇಡಂ, ನಾನು ತುಂಬಾ ದಿವಸಗಳಿಂದ ಇದಕ್ಕಾಗಿ ಕಾಯ್ತಾ ಇದ್ದೆ..ಆ ಮೇಜಿನ ಮೇಲೆ ಕುಳಿತು 500 ಸಲ ಹೀಗೆ ಬರೆಯಿರಿ- "I will not jump a red signal" ಅಂತ.

- Teacher : Tell me a sentence that start with "I"
  Student : "I" is the..
  Teacher : Stop ! Never put "is" after "I" always put "am"
  Student : OK, "I" am the ninth letter of the alphabet.

**ಸಂಗ್ರಹ : ಶ್ರೀಮತಿ ಮಂಜುಳಾ ಭಟ್**


*With best compliment from :*

**Advocate**
**SHRI M. S. PANDIT**
**PUNE**





*PAGE DONATED BY : **SHRI RAM HASYAGAR, M/S. ARMSTRONG INDIA** (DEC.-2008)*

# WOMEN AS ENTREPRENEURS

- A. P. Lalitha M.Sc.,M.Ed.
Proprietrix

**ABSTRACT : An urge to exercise power over things and objects persists among all human beings. This urge is an intrinsic quality of women entrepreneur. Entrepreneurship is for economic sustainability, social dignity, and acquiring capability to face the challenges of the life. It is an urge to lead the comfortable and meaningful life.**

**Women entry into business in India is a recent phenomenon. Women entrepreneurship has come a long way from the three P's - pickles, powder (masala), and papad, to the three E's - engineering, electronics, and energy.**

**However the presence of women as entrepreneurs are very less. Even though women are considered as the backbone of the progress of a nation, there are many socio-economic reasons which are hampering women in taking up entrepreneurship. But in spite of all these odds, the large number of women are showing their presence in the industries as promising entrepreneurs. Their zeal, commitment, perseverance are new hopes for young entrepreneurs. Women's inherent qualities like patience, sincerity, honesty, integrity, perseverance, kindness and above all the belief in 'that' supreme power make her to sail towards the safer coast and greener pastures.**

Entrepreneurs are individuals who recognize opportunities where others see chaos or confusion. They are critical contributors to economic growth through their leadership, management, innovation, creativity, research and development, job creation, productivity and formation of new industry.

When someone introduces me as "Woman Entrepreneur", I feel funny! Why this prefix 'Woman'? Some times I even admonish "I am an entrepreneur. No need to say woman entrepreneur because they can see I am a woman".

Are women entrepreneurs a separate category? Do they need a separate treatment? Are they very different from their male counterparts? Irrespective of sex, an individual with the entrepreneurship qualities, as I said in the beginning, becomes an entrepreneur. Sex is no bar for entrepreneurship.

The government of India defines a woman entrepreneur as ***"one who owns and controls an enterprise having share capital not less than 51% as partners / shareholders/ directors of private limited company/members of co-operative society."***

In India, the entry of woman in the field of industry and business as owner is a recent development. Women are willing to become entrepreneurs due to two main factors namely "Pull factors" and "Push factors". Under pull factors, women choose a profession as a challenge and adventure with an urge to do something new and to have an independent occupation. Under push factors, the women are compelled to take up their own business to get over financial difficulties and responsibilities.

The existing women entrepreneurs in India can be classified into three main categories -

1. Forced entrepreneurs, who are compelled by circumstances or family business responsibilities to take up a career in business and industry.
2. Chance entrepreneurs, who have entered into business by luck or accident without any preparation.
3. Created entrepreneurs, who are specifically identified, motivated, trained, equipped and developed as entrepreneurs.

In many cases, the enterprises which are in women's name, are actually run by men who control the operations and decision making. When man and woman run an enterprise, particularly if they are couple, people generally recognize the enterprise with man rather than woman irrespective of her total involvement. Poor woman! She has to prove her credibility and capability. In times of decision making, crisis and problem solving, she must be very very diplomatic and handle the situation with extra care because she has to face the big ego of her husband. Really, it is just like walking along razor's edge. Once women become successful and experienced, the sex biases disappear!

**Problems of Women Entrepreneurs :**

Women entrepreneurs encounter two sets of problems viz general problems of entrepreneurs and problems specific to women. Financial problems, labour problems, scarcity of raw materials, stiff competition, risk bearing ability, legal and procedural formalities, complicated bank procedures, labour laws, taxation, chasing bills etc. are general problems of all entrepreneurs.

**The specific problems are :**

1. **Family ties :-** Basic problem or difficulty of a woman entrepreneur is that she is a woman! Society believes that woman's world is required to be focused around her family and household. In case of married woman, she has to strike a fine balance between her business and family. She is considered to be subordinate to her husband. She has to play duel roles. This 'super woman' role squeezes her.
2. **Problems of finance :-** Finance is regarded as 'life-blood' for any enterprise. But in our male dominated world, usually financial power is male centered. Women, generally, do not have properties on their names as a result of which they find difficult to obtain the loans. Banks, even those with women's cells, consider women less

*continued on page 11*

*PAGE DONATED BY : **SHRI N. R. HEGDE, DOMBIVLI** (DEC.-2010)*

# ಸಂಕ್ಷಿಪ್ತ ಸುದ್ದಿಗಳು

## Donation



Received donation of Rs.2000/- from Smt Lalita and Shri M.T. Hegde on the happy occasion of marriage of their son **Chi. Kedar** with **Chi. Sou. Vasudha,** D/o. Smt. Bharati and Shri B. D. Vishwamitra on 2-6-2010 at Sirsi (N.K).

***We wish a happy and prosperous wedded life to newly married couple.***

## Achievements



- Kumar M. Sachin, S/o. Smt. Vanita and Shri Manjunath Hegde, Mysore has scored 98.56% in S.S.L.C. Board Examination held in April 2010. He stood 3rd in the state



- Kumari Amulya Hegde, D/o. Smt. Suvarna and Shri Dattatraya Hegde, has scored 94.36% in S.S.C. examination held in March 2010.



- Kumar Parashuram G. Shastry, Panvel, S/o. Smt. Siddhalakshmi and Shri Girish Shastry has scored 92.73% in S.S.C. examination held in March 2010.



- Kumar Sachin Hegde,Sirsi, S/o. Smt. Lata and Shri Ganesh Hegde has scored 91.68% in S.S.L.C. Board Examination held in April 2010.



- Kumar Arun Hegde, Vasai, S/o. Smt. Shyamala and Shri Dattatraya Hegde has scored 90.36% in S.S.C Board Examination held in March 2010.



- Kumar Sandesh G. Bhat S/o. Smt. Champa and Shri Ganapati B. Bhat, Dahisar has scored 90% in S.S.C. exam held in March 2010.

***Havyaka Welfare Trust congratulate them and wishes them a bright future***

## ದುಃಖದ ನಿಧನ



ಶ್ರೀ ಗಜಾನನ ಶಂಕರ ಹೆಗಡೆಯವರು ತಾ. 27.6.2010ರಂದು ಹೊಲನಗದ್ದೆ ಕಡಲೆ ಗ್ರಾಮದಲ್ಲಿ, ತಮ್ಮ ಸ್ವಗೃಹದಲ್ಲಿ ಅಲ್ಪಕಾಲ ಅನಾರೋಗ್ಯದಿಂದ ನಿಧನ ಹೊಂದಿದರು. ಚಿಕ್ಕ ವಯಸ್ಸಿನಲ್ಲಿಯೇ ಮುಂಬಯಿಗೆ ಬಂದು ವಿದ್ಯಾರ್ಜನೆಯೊಂದಿಗೆ, ನೌಕರಿಯನ್ನೂ ಮಾಡುತ್ತ ಮುಂದೆ ಮುಂಬಯಿಯಲ್ಲಿಯೇ ಸ್ಥಾಯಿಯಾದರು. ನಮ್ಮ ಸಂಸ್ಥೆಯ ಅಜೀವ ಸದಸ್ಯರಾದ ಇವರು ಸಂಸ್ಥೆಯ ಕೋಶಾಧಿಕಾರಿಗಳಾಗಿಯೂ ಕೂಡ ಕಾರ್ಯ ನಿರ್ವಹಿಸಿದ್ದರು. ಮುಂಬಯಿಯ ಯಾಂತ್ರಿಕ ಜೀವನದಿಂದ ಬೇಸತ್ತ ಅವರು ಕೆಲಸದಿಂದ ನಿವೃತ್ತಿ ಹೊಂದಿ 1985ರಲ್ಲಿ ಹುಟ್ಟೂರಿಗೆ ಮರಳಿದರು. ಲವಲವಿಕೆ, ಚಟುವಟಿಕೆಗಳ ಚಿಲುಮೆಯಾದ ಅವರು ಅಲ್ಲಿಯೂ ಕೂಡಾ ಲಾಯನ್ಸ್ ಕ್ಲಬ್‌ನ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದರು. ಅವರು ತಮ್ಮ 74ನೇ ವಯಸ್ಸಿನಲ್ಲಿ ತಮ್ಮ ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸೋಣ. ●

### APPEAL

**In view of making 'HAVYAKA SANDESHA' more popular, readers friendly and useful, we want more contribution from our members.**

**We request readers to contribute articles expressing their knowledge, experience & talents in the form of articles, short stories, poems etc. and help us to make it more interesting and useful.**

**- Editorial Board**

**'ಹವ್ಯಕ ಸಂದೇಶ' ಹೆಚ್ಚು ಜನಪ್ರಿಯವಾಗಿ, ವೈವಿಧ್ಯತೆಯೊಂದಿಗೆ ನಿಮ್ಮ ಕೈ ಸೇರುವಂತೆ ಮಾಡಲು ನಾವು ಉತ್ಸುಕರಾಗಿದ್ದೇವೆ. ಈ ದಿಕ್ಕಿನಲ್ಲಿ ಹೆಜ್ಜೆಯಿಡಲು ನಿಮ್ಮ ಸಹಕಾರ ಅಗತ್ಯ.**

**ನಿಮ್ಮ ಅನುಭವ, ಜ್ಞಾನ, ಸಣ್ಣ ಕಥೆ, ಕವನಗಳನ್ನು ನಮಗೆ ಕಳುಹಿಸಿ ಸಹಕರಿಸಿದಲ್ಲಿ ನಾವು ಪ್ರಗತಿ ಸಾಧಿಸಬಹುದು. – ಸಂಪಾದಕ ಮಂಡಳಿ**

*PAGE DONATED BY :* ***SHRI S. M. HEGDE, SANTACRUZ***

*continued from page 9*

credit-worthy and discourage women borrowers. Many a time, financial institutions compel husbands to become partners!

3. **Limited Mobility :-** Women find it difficult to travel alone from place to place for business. A single woman asking for a room is still looked upon with suspicion.

4. **Lack of Education and Confidence :-** In our society, more importance is given to educating the male child as compared to female child. This results in lack of schooling & vocational training of women. Lack of education causes low achievement, inferiority, unaware of technology and marketing knowledge.

Some common features of Indian women entrepreneurs are as follows :

- Women with small families are more likely to become entrepreneurs.
- A majority of women entrepreneurs are married.
- Many entrepreneurs belong to low-income group.
- Most entrepreneurs are either housewives or fresh graduates with no previous experiences of running a business.
- Woman's hard work is generally responsible for the launch and sustainability of the industry.
- Many women become entrepreneurs out of economic necessity.
- Women prefer stabilization of income and minimization of risk over maximization of income.
- Repayment of loan is prompt and regular compared to men.

Amidst of all the obstacles, constraints, taboos, with education and training, the women have gained confidence to do all kinds of work and do it efficiently, rather better than men. The enterprises set-up by women cover a wide range of activities like leather, textile, electronics, computer applications, plastics, civil, mechanical engineering, hotels, chemicals, stationary & press, tours & travels and so on.

The success of woman as an entrepreneur is due to her unique qualities. Researches revealed the following qualities for her success.

1. **Communication skills :-** Many women tend to be better than their male counterparts at articulating their ideas and expressing themselves.

2. **People skills :-** Many women tend to be very effective at reading emotions in the faces of others and deciphering postures, gestures and voice inflections. As a result, they are able to interact well with others.

3. **Web thinking :-** Women have ability to gather data from the environment and construct intricate relationship between the pieces of information. In contrast, many men tend to compartmentalize information & focus only on what they feel is important. Women have ability for long term planning and possess a higher-than-average tolerance for ambiguity.

*continued on page 12*


**SUVITEK INTERNATIONAL**

**Authorised Dealers for : ARMSTRONG, INTERARCH, CRIL**

- ★ PRE-ENGINEERED BUILDINGS
- ★ ROOFINGS
- ★ WALL CLADDINGS
- ★ THERMAL INSULATIONS
- ★ FALSE CEILINGS
- ★ FALSE FLOORINGS
- ★ BLINDS
- ★ SIGNAGES

◆

**5/98, Jayvijay Society, Sahar Road, Mumbai-400 099 India**
**Tel. : 2834 2952 ● Fax : 2824 8794**
**E-mail : suvitek@gmail.com**

*ADVT.*





*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2009)*

RNI NO. MAHBIL / 2000 / 746,
Postal R.NO. L / TECH - 47 / 989 / MBI / 2009 - 11

WPP Licence No. MR/Tech WPP - 188 / North / 09-11 Posted at Mumbai Patrika Channel Stg. Office Mumbai-400 001.

Date of Posting :
27, 28th of every previous month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

To,

*continued from page 11*

4. **Consensus building :-** Women tend to be good negotiators. They view situations in "win-win" terms and seek to create harmonious relationships with the customers.

5. **Friendship :-** She has the ability to build and nurture good relationships. She maintains long term client relationship and friendship in business.

By nature, woman protects her belongings, may it be child, husband or family; similarly her enterprise. Due to her very nature, in crisis, she fights continuously with strength and courage until she succeeds.

For strengthening the women entrepreneurship in India, the following areas need to be concentrated upon:

- Socio cultural change.
- Development of support system to reduce women's family responsibilities.
- Mahila banks & Mahila Co-operative Credit Societies should widen their activities in development of women enterprises.
- Intensive entrepreneurship development training programs.
- Special efforts for women in rural areas.

The new industrial policy of the government of India has laid special emphasis on the training programs for women to enable them to start their own ventures. Financial institutions & banks have also set up special cells to assist women entrepreneurs.

Banks & financial institutions offer various schemes to finance women entrepreneurs such as -

- Sthree shakthi package - to put up small scale industry by SBI.
- Mahila Udyam Nidhi Scheme - for tiny & small scale industries.
- Annapoorna scheme - for catering units.
- Priyadarshini - up to Rs.25,000/-
- Can Mahila - up to Rs.50,000/- etc

The nationalized banks & State Financial Corporations advance loans to women entrepreneurs on preferential basis. State Industrial Development Corporation, District Industries Centre, State Khadhi & Village Industries Board provide loans, subsidies and grants to small scale industries & women entrepreneurs. In addition, a few associations of women entrepreneurs like AWAKE (Association of Women Entrepreneurs of Karnataka), SEWA (Self-Employed women's Association), FIWE (Federation of Indian Women Entrepreneurs) etc. are doing considerable work for the benefit of women entrepreneurs.

In my opinion, we should not rely upon subsidies or special packages. There is no point in asking for reservation or special treatment as women. We, women are very strong, infact stronger than men. Nature has graced us with abundant of love, kindness, forbearance, patience, confidence, courage, problem solving skill and above all, a very kind heart.

I was brought up in such an environment that my parents never differentiated between me and my brother. Cycling , swimming, sports, fine arts, education…. whatever may be, they encouraged both of us equally. I am talking of the days about 20 to 30 years back. Because of my exceptionally good parents, the patience, confidence, courage, positive attitude and strength, become my natural character.

To conclude, we can say, women entrepreneurship has come a long way from the three P's - pickles, powder (masala) and papad to the three E's - engineering, electronics and energy. It is said that "Traveller, there are no paths; the paths are made by walking." This is very much true for women entrepreneurs. It is a vast horrendous ocean with full of challenges, rebuts, corruption and financial tides. But she has to swim and swim against the various odds and come across. Her inherent qualities like intelligence, patience, sincerity, honesty, integrity, perseverance, kindness, love and above all, the belief in 'THAT' supreme power make her to sail towards safer coast and greener pastures. ●

*PAGE DONATED BY : **SHRI VIVEK BHAGWAT,** MULUND (DEC.-2010)*